ತೋರಿಸಿದ. ಅಲ್ಲಿದ್ದ ಯುವತಿ ಮುಗುಳ್ನಗುತ್ತ ಏನೇನೊ ಫ್ರೆಂಚ್‌ನಲ್ಲಿ ಹೇಳಿ ಇವರ ಕೈಯಲ್ಲಿ ಒಂದಿಷ್ಟು ನೋಟುಗಳನ್ನಿಟ್ಟು ಸ್ಲಿಪ್ಪನ್ನೂ ತಿರುಗಿ ಕೊಟ್ಟಳು. ಅಲ್ಪಸ್ವಲ್ಪ ಅರ್ಥವಾದ ಪ್ರಕಾರ ಪೈಲಟ್‌ಗಳ ಮುಷ್ಕರದಿಂದಾಗಿ ಬೆಂಗಳೂರಿಗೆ ಹೋಗುವ ಏರ್ ಫ್ರಾನ್ಸ್ ವಿಮಾನ ರದ್ದಾಗಿತ್ತು. ಮುಂಬಯಿಗೆ ಹೋಗುವ ಏರ್ ಫ್ರಾನ್ಸ್‌ನ ಬೇರೆ ವಿಮಾನದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಅದು ಹೊರಡಲು ಇನ್ನೂ ಆರು ತಾಸು ತಡವಿತ್ತು. ತೊಂದರೆಗೆ ಪರಿಹಾರವಾಗಿ ಏರ್ ಫ್ರಾನ್ಸ್ ಒಂದಿಷ್ಟು ಹಣ ಹಿಂದಿರುಗಿಸಿತ್ತು. ಈ ವಿವರಗಳಲ್ಲೂ ಅವರಿಗೆ ಸಂದೇಹವಿತ್ತು. ಇನ್ನೂ ಆರು ತಾಸು ಕಾಯಬೇಕು. ವಿಮಾನದಲ್ಲಿ ಕೊಟ್ಟ ಕಾಫಿ ಕುಡಿದು ಎರಡು ಬ್ರೆಡ್ಡು ಚೂರು ತಿಂದದ್ದಷ್ಟೆ. ಹಸಿವಾಗತೊಡಗಿತು. ಸಮಯಕ್ಕೆ ಸರಿಯಾಗಿ ಮಾತ್ರೆಗಳನ್ನು ಸೇವಿಸಬೇಕು. ಖಾಲಿಹೊಟ್ಟೆಯಲ್ಲಿ ತಿನ್ನಲಾಗದು. ಫರ್ಲಾಂಗು ದೂರದ ಕೆಫಿಟೇರಿಯಾ ಹುಡುಕಿಕೊಂಡು ಹೋದರು. ಏನೇನೋ ಅಪರಿಚಿತ ತಿನಿಸುಗಳು. ಮೆನನ್‌ರ ಪೂರ್ವಜರು ದೇವಸ್ಥಾನದ ಆಡಳಿತದಲ್ಲಿದ್ದವರು; ಅಪ್ಪಟ ಶಾಖಾಹಾರಿಗಳು. ಅಲ್ಲಿದ್ದವ ಫ್ರೆಂಚಿನಲ್ಲಿ ಏನೇನೋ ಹೇಳಿದ. ಯಾವುದೂ ಶಾಖಾಹಾರದಂತೆ ಕಾಣಲಿಲ್ಲ. ಬಿಸ್ಕೆಟ್ ಪ್ಯಾಕೆಟ್ ಕೊಂಡು ಏಳೆಂಟು ಬಿಸ್ಕೆಟ್ಟು ತಿಂದು ಮಾತ್ರೆಗಳನ್ನು ನುಂಗಿ ನೀರು ಕುಡಿದರು. ಅವರ ಮೊಬೈಲಿನಲ್ಲಿ ಇಂಟರ್‌ನ್ಯಾಷನಲ್ ರೋಮಿಂಗಿರಲಿಲ್ಲ. ಅವರು ಜೋರ್ಡಾನಿನಲ್ಲಿರುವ ಕಾಲಕ್ಕೆ ಮೊಬೈಲು ಹುಟ್ಟಿರಲೇ ಇಲ್ಲ. ಪ್ರೆಶರ್ ಏರಿದಾಗ ಅವರಿಗೆ ಗೊಂದಲವಾಗಿ ಗಡಿಬಿಡಿಗೆ ಬೀಳುತ್ತಾರೆ. ಮಾಹಿತಿಗಳು ಕಲಸಿ ಹೋದಂತಾಗಿ ಮೈಪರಚಿಕೊಳ್ಳುವಂತಾಗುತ್ತದೆ. ಊರಿಗೆ ಇಂಟರ್‌ನ್ಯಾಷನಲ್ ಕರೆ ಮಾಡುತ್ತಿದ್ದ ಅಲ್ಪಸ್ವಲ್ಪ ನೆನಪಿತ್ತು. ಒಂದು ಕೌಂಟರಿನಲ್ಲಿ ಪಬ್ಲಿಕ್ ಫೋನು ಕಂಡಿತು. ಬ್ಯಾಗಿನಲ್ಲಿ ತಡಕಾಡಿ ಚಿಕ್ಕ ನೋಟ್ಬುಕ್ಕು ತೆಗೆದರು. ಅಮೆರಿಕದ ಕೋಡ್ ಮುಂತಾದ್ದೆಲ್ಲ ಹುಡುಕಿ, ಪಕ್ಕದ ಕೌಂಟರಿನಲ್ಲಿ 'ಫೋನ್', 'ಕಾಯ್ನ್' ಅಂತ ಹೇಳುತ್ತ ಅಭಿನಯವನ್ನೂ ಮಾಡಿದ್ದಕ್ಕೆ ಅವರು ಮತ್ತೊಂದುಕಡೆ ತೋರಿಸಿ ಅಲ್ಲಿ ಹೋಗಿ ಒಂದು ನೋಟು ಕೊಟ್ಟದ್ದಕ್ಕೆ ಆತ ಇವರನ್ನ ಅಳೆಯುವಂತೆ ನೋಡಿ ಒಂದಿಷ್ಟು ಬಿಲ್ಲೆಗಳನ್ನು ಕೊಟ್ಟು ಮುಗುಳ್ನಕ್ಕು ಬೀಳ್ಕೊಟ್ಟ. ನಂಬರುಗಳನ್ನೆಲ್ಲಾ ಒತ್ತಿ ಒಂದು ಬಿಲ್ಲೆಯನ್ನು ಹಾಕಿ ರಿಂಗಾಗುವುದು ಕೇಳುತ್ತ ಯಶಸ್ಸು ಸಿಗುವ ಯಾವ ಭರವಸೆಯಿಲ್ಲದೇ ಯುಗವನ್ನು ಕಾಯುವಾಗ ಆ ಕಡೆಯಿಂದ ಮಗಳ 'ಹಲೋ' ಸದ್ದು ಕೇಳಿ ಉದ್ವೇಗದಿಂದ ಗಂಟಲು ಕಟ್ಟಿ, ತೊದಲಿ ತೊದಲಿ ಮಗಳಿಗೆ ಹೇಳಿಮುಗಿಸುತ್ತಿದ್ದಂತೆ ಬಿಲ್ಲೆಯ ಅವಧಿ ಮುಗಿದು ಸಂಪರ್ಕ ಕಡಿಯಿತು. 'ಅಯ್ಯೋ ಅವಳಿಗೆ ಯಾಕೆ ಹೇಳಕ್ಕೆ ಹೋದ್ರಿ? ಅಮೆರಿಕದಲ್ಲಿ ಕುಳಿತು ಅವ್ಳೇನು ಮಾಡಕ್ಕಾಗುತ್ತೆ... ಪಾಪ!' ಅಂತೆಲ್ಲಾ ಹೆಂಡತಿ ಆಕ್ಷೇಪಿಸತೊಡಗಿದ್ದಕ್ಕೆ ಅದೂ ಹೌದು ಅನ್ನಿಸಿ ಬೇಜಾರು ಸುರುವಾಯ್ತು. ಅಪ್ಪನಿಗೆ ಬೀಪಿಯಿದೆ, ಡಯಾಬಿಟೀಸಿದೆ ಅಲ್ಲದೆ ಈಗಷ್ಟೆ ನ್ಯುಮೋನಿಯದಿಂದ ಚೇತರಿಸಿಕೊಂಡಿದಾರೆ. ಸಾಲದ್ದಕ್ಕೆ ಎಂಬತ್ತರ ಪ್ರಾಯ... ಏನೇನಾಗುತ್ತೋ ಛೆ! ಎಂದು ತೀವ್ರ ಆತಂಕದಿಂದ ಚಡಪಡಿಸುತ್ತಾ ಗಂಡನಿಗೆ ಫೋನು ಮಾಡಿ ನಾವು ಎಡವಟ್ಟು ಮಾಡಿದೆವು ಅಂತ ಪರಸ್ಪರರನ್ನು ದೂಷಿಸಿ ವಾಗ್ವಾದ ಮಾಡಿಕೊಂಡು ಪದೇಪದೇ ಮೆನನ್ನರ ಮೊಬೈಲಿಗೆ ಕರೆ ಮಾಡತೊಡಗಿದರು. ಮಗಳು ಪ್ಯಾರಿಸಿಗೇನೂ ತಕ್ಷಣ ಬರಲು ಸಾಧ್ಯವಿಲ್ಲ; ಯಾವ ಗೇಟಿನಲ್ಲಿ ನಮ್ಮ ಮುಂದಿನ ಫ್ಲೈಟು ಅಂತ ಹೇಳಲು ಸಾಧ್ಯವಿಲ್ಲ: ಹೋಗಲಿ, ಒಂದು ಶಾಖಾಹಾರಿ ಊಟಕ್ಕೆ ವ್ಯವಸ್ಥೆ ಮಾಡಲೂ ಸಾಧ್ಯವಿಲ್ಲ. ಮತ್ಯಾಕೆ ಅವಳನ್ನ ಆತಂಕಕ್ಕೆ ದೂಡಿ ಈಗ ಮೇಲಿಂದ ಮೇಲೆ ಫೋನುಮಾಡುತ್ತ... ಅವಳಿಗೆ ಇಲ್ಲದ ಸಂಕಟವುಂಟುಮಾಡ್ಬೇಕಿತ್ತೋ... ಅಂತ ಹೆಂಡತಿಯ ಗೊಣಗಾಟ ಸೇರಿ ಕರಕರೆಯೆನಿಸತೊಡಗಿತು. ಮತ್ತೆ ನಾಲ್ಕು ಬಿಸ್ಕೆಟ್ಟು ತಿಂದು